ಓ.ಎಸ್. ನಂಃ **131/2017**
ಡಿ.ಡಬ್ಲ್ಯೂಃ **1**

ದಿನಾಂಕ **13-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯರ ಪರ: ಶ್ರೀ. ಜಿ.ಬಿ.ಆರ್ ವಕೀಲರಿಂದಃ

ನಾನು ನೀಲಕಂಠಪ್ಪ ರವರನ್ನು ನೋಡಿದ್ದೇನೆ. ಆತ 1987 ರಲ್ಲಿ ಮರಣಹೊಂದಿದ್ದಾನೆ. ಆತ ಸರಕಾರಿ ಶಾಲಾ ಶಿಕ್ಷಕರಾಗಿದ್ದರು ಹಾಗೂ ನಂತರ ಸದರಿ ಹುದ್ದೇಗೆ ರಾಜಿನಾಮೆ ನೀಡಿ ಗುತ್ತಿಗೆದಾರ ಆಗಿದ್ದರು. ಆತ ದೊಡ್ಡ ಗುತ್ತಿಗೆದಾರ ಹಾಗೂ ಗ್ರಾಮದಲ್ಲಿ ಶ್ರೀಮಂತ ವ್ಯಕ್ತಿ ಆಗಿದ್ದರು ಎಂದರೆ ಸರಿ. ಸದರಿ ನೀಲಕಂಠಪ್ಪ ದಾವಾ ಆಸ್ತಿ ಅಲ್ಲದೇ ಬೇರೆ ಅಸ್ತಿಗಳನ್ನು ಸಹ ಹೊಂದಿದ್ದರು ಎಂದರೆ ಸರಿ. ಸಾಕಷ್ಟು ಜಮೀನು ಹೊಂದಿದ್ದರಿಂದ ಆತನಿಗೆ ದಾವಾ ಜಮೀನು ಖರೀದಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆತನ ಹೆಂಡತಿ-ಮಕ್ಕಳು ಊರಿನಲ್ಲಿ ಇದ್ದಾರೆ ಎಂದರೆ ಸರಿ. ನೀಲಕಂಠಪ್ಪ ರವರು ಖರೀದಿ ಮಾಡುವ ಪೂರ್ವದಲ್ಲಿ ದಾವಾ ಜಮೀನು ಬಾಲಪ್ಪ ಇಂದೆ ಗಜಲಪ್ಪ ರವರ ಹೆಸರಿನಲ್ಲಿ ಇತ್ತು. ಸದರಿ ಗೆಜಲಪ್ಪ ರವರಿಗೆ ಎಷ್ಟು ಜನ ಮಕ್ಕಳಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಗೆಜಲಪ್ಪ ರವರಿಗೆ ಎಷ್ಟು ಜನ ಸಹೋದರರಿದ್ದರು ಎಂಬುದು ನನಗೆ ಗೊತ್ತಿಲ್ಲ. ಗೆಜಲಪ್ಪ ರವರಿಗೆ ದೊಡ್ಡ ಬಾಲಪ್ಪ ಹಾಗೂ ಸಣ್ಣ ಬಾಲಪ್ಪ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ಪಹಣಿಯಲ್ಲಿ ಆ ರೀತಿ ದೊಡ್ಡ ಬಾಲಪ್ಪ ಹಾಗೂ ಸಣ್ಣ ಬಾಲಪ್ಪ ಎಂದು ನಿಖರವಾಗಿ ನಮೂದು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಹೋದರರು ಪಾಲು ವಿಭಾಗ ಮಾಡಿಕೊಂಡ ಬಗ್ಗೆಯೂ ಸಹ ದಾಖಲಾತಿಗಳಲ್ಲಿ ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಗೆಜಲಪ್ಪ ರವರ ಸಹೋದರ ನರಸಪ್ಪ ರವರಿಗೆ ಮೆಣಸಿಂಗ್ ಹಾಗೂ ಬಾಲಪ್ಪ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನರಸಪ್ಪ ರವರ ಮಗ ಬಾಲಪ್ಪ ನೀಲಕಂಠಪ್ಪ ರವರ ಹತ್ತಿರ ಕೆಲಸ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನುಗಳು ಸೈದಾಪೂರ-ನಾರಾಯಣಪೇಟೆ ಮುಖ್ಯ ರಸ್ತೆಗೆ ಹೊಂದಿಕೊಂಡು ಇವೆ ಎಂದರೆ ಸರಿ. ನಿಮ್ಮ ಪ್ರಮಾಣ ಪತ್ರದಲ್ಲಿ ಬಾಲಪ್ಪ ತಂದೆ ಗೆಜಲಪ್ಪ ರವರು ದಾವಾ ಆಸ್ತಿಗಳ ಮಾಲಿಕ ಆಗಿರುವುದಿಲ್ಲ ಎಂದು ಬರೆಸಿದ್ದೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಜಮೀನುಗಳ ಚೆಕ್ ಬಂದಿ ನಮೂದಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ನರಸಪ್ಪ ರವರ ಮಗ ಮೆಣಸಿಂಗ್ ರವರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರೂ ಸಹ ಬಾಲಪ್ಪ ರವರು ಖರೀದಿ ಪತ್ರ ಮಾಡಿಕೊಟ್ಟಿಲ್ಲ ಎಂದು ಸಾಕ್ಷ ನುಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನೀಲಕಂಠಪ್ಪ ರವರು 1974 ರಲ್ಲಿ ಬಾಲಪ್ಪ ರವರಿಂದ ದಾವಾ ಜಮೀನು ಖರೀದಿ ಮಾಡಿದ್ದರು. ನಾನು ಈ ದಾವೆ ದಾಖಲಾದ ನಂತರ ನೀಲಕಂಠಪ್ಪ ರವರ ಕುಟುಂಬದವರನ್ನು ಆತ ಮಾಡಿಕೊಂಡಿದ್ದ ಖರೀದಿ ಪತ್ರದ ಬಗ್ಗೆ ವಿಚಾರಣೆ ಮಾಡಿಲ್ಲ. ನಿಡಿ-36 ರ ಖರೀದಿ ಪತ್ರವನ್ನು ಬಾಲಪ್ಪ ರವರು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರನ್ನು ಸತಾಯಿಸಿ ದಾವಾ ಆಸ್ತಿ ಪಡೆದುಕೊಳ್ಳುವ ಉದ್ದೇಶದಿಂದ ನಿಡಿ-36 ರ ದಾಖಲೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ತನ್ನ ಮಗನ ಮದುವೆ ಸಲುವಾಗಿ ಜಮೀನು ಮಾರಾಟ ಮಾಡಿರುವುದಾಗಿ ನಿಡಿ-36 ರ ಖರೀದಿ ಪತ್ರದಲ್ಲಿ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಬಾಲಪ್ಪ ರವರ ಮಗ ಬಸವರಾಜಪ್ಪ ಚಿಕ್ಕ ವಯಸ್ಸಿನವರಾಗಿದ್ದು ಯಾದಗಿರಿಯ ಹೊಟೇಲಿನಲ್ಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸವರಾಜಪ್ಪ ರವರ ತಂದೆ-ತಾಯಿ ಆತ ಚಿಕ್ಕವನಿದ್ದಾಗ ತೀರಿಕೊಂಡಿದ್ದರು ಹಾಗಾಗಿ ಆತ ಯಾದಗಿರಿಯಲ್ಲಿ ಕೆಲಸ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸಾಕ್ಷಿ ಸರಿಯಲ್ಲ, ನಾವು ನೀಲಕಂಠಪ್ಪನ ಕಡೆಯಿಂದ ಜಮೀನು ಖರೀದಿ ಮಾಡುವ ದಿನಗಳಲ್ಲಿಯೂ ಸಹ ನಾನು ಬಾಲಪ್ಪನನ್ನು ನೋಡಿದ್ದೆನು ಎಂದು ನುಡಿಯುತ್ತಾರೆ. ವಾದಿಯರ ತಂದೆ ಬಸವರಾಜಪ್ಪ ಯಾದಗಿರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆತ ಯದಗಿರಿಯಲ್ಲಿಯೇ ಪ್ರೀತಿಸಿ ಮದುವೆ ಮಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆತನ ತಂದೆ-ತಾಯಿ ಆತನ ಮದುವೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ನೀಲಕಂಠಪ್ಪ ಮೋಸದಿಂದ ತನ್ನ ಹೆಸರಿಗೆ ಖರೀದಿ ಪತ್ರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

3. ದಾವಾ ಜಮೀನಿನಲ್ಲಿ ನಿಜಾಮರ ಕಾಲದಲ್ಲಿಯೇ ರಸ್ತೆ ಆಗಿರುತ್ತದೆ. ರಸ್ತೆಗೆ ಜಮೀನು ಹೋದ ನಂತರ ಉಳಿದ ಜಮೀನು ಮಾತ್ರ ಪಹಣಿ ಪತ್ರಿಕೆಯಲ್ಲಿ ನಮೂದಾಗಿತ್ತು ಎಂದರೆ ಸಾಕ್ಷಿ ರಸ್ತೆಗೆ ಮಾತ್ರ ಅಲ್ಲದೇ ದಾವಾ ಜಮೀನಿನಲ್ಲಿ ಹಳ್ಳ ಸಹ ಇದ್ದು ಅದನ್ನು ಹೊರತು ಪಡಿಸಿ ಉಳಿದ ಜಮೀನನ್ನು ನೀಲಕಂಠಪ್ಪ ರವರು ನಮಗೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-1 ಹಾಗೂ 36 ರ ಖರೀದಿ ಪತ್ರಗಳಲ್ಲಿ ದಾವಾ ಜಮೀನಿನಲ್ಲಿ ರಸ್ತೆ ಹಾದು ಹೋಗಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ

ಸರಿಯಲ್ಲ. ನೀಲಕಂಠಪ್ಪ ರವರು ಸುಳ್ಳು ಚೆಕ್ ಬಂದಿಯನ್ನು ನಮೂದಿಸಿ ನರಸಪ್ಪ ರವರ ಬಾಲಪ್ಪ ರವರ ಕಡೆಯಿಂದ ಸುಳ್ಳು ಕ್ರಯ ಪತ್ರ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಗೆಜಲಪ್ಪ ರವರ ಮಗ ಬಾಲಪ್ಪ ಹಿಂದೆಯೇ ಮರಣಹೊಂದಿದ್ದರು ಹಾಗಾಗಿ ನೀಲಕಂಠಪ್ಪ ರವರು ನರಸಪ್ಪ ರವರ ಮಗ ಬಾಲಪ್ಪ ರವರ ಕಡೆಯಿಂದ ಖರೀದಿ ಪತ್ರ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ರಸ್ತೆಗೆ ಎಷ್ಟು ಜಮೀನು ಹೋಗಿದೆ ಹಾಗೂ ಆ ನಂತರ ಎಷ್ಟು ಜಮೀನು ಉಳಿದಿದೆ ಎಂಬ ಬಗ್ಗೆ ನಿಡಿ-1 ಮತ್ತು 36 ರ ಖರೀದಿ ಪತ್ರಗಳಲ್ಲಿ ನಮೂದು ಇಲ್ಲ ಎಂದರೆ ಸರಿ.

4. ನಿಡಿ-36 ರ ಖರೀದಿ ಪತ್ರದಲ್ಲಿ ಪೂರ್ವಕ್ಕೆ ಭೀಮಪ್ಪ ರವರ ಜಮೀನು, ಪಶ್ಚಿಮಕ್ಕೆ ಪಿ.ಡಬ್ಲೂ.ಡಿ ರಸ್ತೆ, ಉತ್ತರಕ್ಕೆ ಬಸಪ್ಪ ರವರ ಜಮೀನು ಹಾಗೂ ದಕ್ಷಿಣಕ್ಕೆ ನಾಲ ಎಂದು ನಮೂದು ಇದೆ ಎಂದರೆ ಸರಿ. ನೀಲಕಂಠಪ್ಪ ರವರು ನನ್ನ ತಂದೆಗೆ ಮಾಡಿಕೊಟ್ಟಿರುವ ನಿಡಿ-1 ರ ಖರೀದಿ ಪತ್ರದಲ್ಲಿ ಪೂರ್ವಕ್ಕೆ ಬಾಲಪ್ಪ ಮೆಣಸಿನ ರವರ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿ. ಪಶ್ಚಿಮಕ್ಕೆ ಸಾಯಿಬಣ್ಣ ತಂದೆ ಸಂಜವಿ ಎಂದು ನಮೂದು ಇದೆ ಎಂದರೆ ಸರಿ. ಉತ್ತರಕ್ಕೆ ಖರೀದಿದಾರನ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಸರಿ, ಸದರಿ ಜಮೀನಿನಲ್ಲಿಯೇ ರಸ್ತೆ ಹೋಗಿದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ನಾಲ ಎಂದು ನಮೂದು ಇದೆ ಎಂದರೆ ಸರಿ. ನಿಡಿ-1 ಮತ್ತು ನಿಡಿ-36 ರ ಖರೀದಿ ಪತ್ರಗಳಲ್ಲಿನ ಚೆಕ್ ಬಂದಿ ಒಂದಕ್ಕೊಂದು ತಾಳೆ ಆಗುವುದಿಲ್ಲ ಎಂದರೆ ಸಾಕ್ಷಿ ಆಗ ಜಮೀನು ಮಾಲಿಕರು ಬದಲಾಗಿದ್ದರು ಎಂದು ನುಡಿಯುತ್ತಾರೆ. ಆದರೆ ರಸ್ತೆ ಬದಲಾಗುವುದಿಲ್ಲ ಎಂದರೆ ಸಾಕ್ಷಿ ಉತ್ತರಕ್ಕೆ ರಸ್ತೆ ಇದೆ ಎಂದು ನುಡಿಯುತ್ತಾರೆ.

5. ಸರ್ವೆ ನಂ.62/1 ರಲ್ಲಿ ಒಟ್ಟು 03 ಎಕರೆ 24 ಗುಂಟೆ ಜಮೀನು ಇತ್ತು. ನಾವು ಸದರಿ ಸಂಪೂರ್ಣ ಜಮೀನು ಖರೀದಿ ಮಾಡಿದ್ದೆವು. ನಿಡಿ-1 ರ ಖರೀದಿ ಪತ್ರದಲ್ಲಿ ಸರ್ವೆ ನಂ.62/1 ರ 01 ಎಕರೆ 30 ಗುಂಟೆ ಜಮೀನು ಮಾತ್ರ ನೀವು ಖರೀದಿ ಮಾಡಿರುವುದಾಗಿ ನಮೂದು ಇದೆ ಎಂದರೆ ಸಾಕ್ಷಿ ರಸ್ತೆಗೆ ಜಮೀನು ಹೋದ ನಂತರ ಉಳಿದ ಎಲ್ಲ ಜಮಿಜನನ್ನು ನೀಲಕಂಠಪ್ಪ ನಮಗೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-1 ರ ಖರೀದಿ ಪತ್ರದಲ್ಲಿನ ಜಮೀನಿನ ಪಕ್ಕಕ್ಕೆ ನಮಗೆ ಸೇರಿದ ಬೇರೆ ಜಮೀನು ಇರಲಿಲ್ಲ. ದಾವಾ ಜಮೀನಿಗೂ ಹಾಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ವರೆಗೆ ವಾದಿಯರೇ ದಾವಾ ಜಮೀನಿನ ಮಾಲಿಕರು

ಹಾಗೂ ಕಬ್ಜೆದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರ ಖರೀದಿ ಪತ್ರದಲ್ಲಿ ಸರ್ವೆ ನಂ.62/1 ರಲ್ಲಿನ 01 ಎಕರ 30 ಗುಂಟೆ ಮಾತ್ರ ಖರೀದಿಸಿ ಸಂಪೂರ್ಣ 03 ಎಕರೆ 24 ಗುಂಟೆ ಜಮೀನಿನ ಖಾತಾ ಬದಲಾವಣೆ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನ ತಂದೆ ಮೋಸದಿಂದ ಸದರಿ ಕೃತ್ಯ ಎಸಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರೇ ದಾವಾ ಜಮೀನಿನ ಸ್ವಾಧೀನದಲ್ಲಿ ಇರುವುದು ಗೊತ್ತಿದ್ದರೂ ನಾನು ಸುಳ್ಳು ದಾಖಲೆ ಹಾಜರು ಪಡಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ